ಇ-ಮೇಲ್ : drsyndicateku@gmail.com
ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ- 577 451

ಸಂಖ್ಯೆ: ಕುವಿ:ಯುಎಟಿ-1 :2025-26/-36 ದಿನಾಂಕ:15-04-2025

ಮಾನ್ಯರೆ,

ವಿಷಯ: ದಿನಾಂಕ:25-03-2025 ರಂದು ನಡೆದ ವಿಶೇಷ ವಿದ್ಯಾವಿಷಯಕ ಪರಿಷತ್ತಿನ ಸಭೆಯ ನಡಾವಳಿಗಳು.

...

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ ಪ್ರಕರಣ - 31(xviii) ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- 2018 ಅಧ್ಯಾಯ-IIರ ಪ್ರಕರಣ-1(iii) ಮತ್ತು 17ರನ್ವಯ ದಿನಾಂಕ:01-10-2024 ರಂದು ವಿಶ್ವವಿದ್ಯಾಲಯದ **"ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ"**ದಲ್ಲಿ ನಡೆದ ದಿನಾಂಕ:25-03-2025 ರಂದು ನಡೆದ ವಿಶೇಷ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- 2018 ಅಧ್ಯಾಯ-IIರ ಪ್ರಕರಣ- 44ರನ್ವಯ ಸದರಿ ನಡಾವಳಿಗಳನ್ನು ಕಳುಹಿಸಿದ 10 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ
15/4/2025

ಗೆ,

**ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ.**

**ಪ್ರತಿಗಳು:-**

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ. ಶಂಕರಘಟ್ಟ,
8) ನಿರ್ದೇಶಕರು,ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
9) ಎಲ್ಲಾ ಅಧ್ಯಕ್ಷರು / ಸಂಚಾಲಕರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,/ಶಿವಮೊಗ್ಗ/ ಕಡೂರು./ ಚಿಕ್ಕಮಗಳೂರು
10) ಎಲ್ಲಾ ಉಪಕುಲಸಚಿವರು./ಸಹಾಯಕ ಕುಲಸಚಿವರುಗಳು/ ಅಧೀಕ್ಷಕರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
11) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ ಶಿವಮೊಗ್ಗ.
12) ನಿರ್ದೇಶಕರು, ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಬಿ.ಹೆಚ್ ರಸ್ತೆ ಕಡೂರು.
13) ಸಂಯೋಜನಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಚಿಕ್ಕಮಗಳೂರು.
14) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
15) ಕಾರ್ಯಪಾಲಕ ಅಭಿಯಂತರರು, ವಿಶ್ವವಿದ್ಯಾಲಯ ಇಂಜಿನಿಯರಿಂಗ್ ವಿಭಾಗ, ವಿಶ್ವವಿದ್ಯಾಲಯ, ಶಂಕರಘಟ್ಟ,
16) ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಚಯ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ,
17) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
18) ಕಛೇರಿ ಪ್ರತಿ.

PROCEEDINGS COV LETT-2025

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:25-03-2025 ರಂದು ಮಂಗಳವಾರ ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ ಇಲ್ಲಿ ನಡೆದ "ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆ"ಯ ನಡಾವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಎ.ಎಲ್. ಮಂಜುನಾಥ್ ಕೆ.ಎ.ಎಸ್., ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಗೋಪಿನಾಥ್ ಎಸ್.ಎಂ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ಸಂಧ್ಯಾಕಾವೇರಿ, ಪ್ರಾಂಶುಪಾಲರು | ಸದಸ್ಯರು |
| 5. | ಶ್ರೀ ಉಲ್ಲಾಸ್ ಇ.ಜಿ, ಪ್ರಾಂಶುಪಾಲರು | ಸದಸ್ಯರು |
| 6. | ಡಾ. ಚಿದಾನಂದ ಎನ್.ಕೆ, ಪ್ರಾಂಶುಪಾಲರು | ಸದಸ್ಯರು |
| 7. | ಡಾ. ಎಂ. ವೆಂಕಟೇಶ್, ಪ್ರಾಂಶುಪಾಲರು | ಸದಸ್ಯರು |
| 8. | ಡಾ. ಪ್ರಭಾಕರ್ ಎಸ್. ಮಂಟೂರೆ, ಪ್ರಾಂಶುಪಾಲರು | ಸದಸ್ಯರು |
| 9. | ಡಾ.ಬಿ.ಜಿ. ಚನ್ನಪ್ಪ, ಪ್ರಾಂಶುಪಾಲರು | ಸದಸ್ಯರು |
| 10. | ಡಾ. ರಾಕೇಶ್ ಎಸ್.ಪಿ, ಪ್ರಾಂಶುಪಾಲರು | ಸದಸ್ಯರು |
| 11. | ಡಾ. ಜಿ.ಎಂ. ಗಣೇಶ್, ಪ್ರಾಂಶುಪಾಲರು | ಸದಸ್ಯರು |
| 12. | ಡಾ. ನಾಗರಾಜ, ಪ್ರಾಧ್ಯಾಪಕರು | ಸದಸ್ಯರು |
| 13. | ಡಾ. ರಾಜೇಶ್ವರ್ ಎ.ಎನ್, ಪ್ರಾಧ್ಯಾಪಕರು | ಸದಸ್ಯರು |
| 14. | ಡಾ. ರಮೇಶ್ ಹೆಚ್.ಎನ್. ಪ್ರಾಧ್ಯಾಪಕರು | ಸದಸ್ಯರು |
| 15. | ಡಾ. ಜಿ. ಪ್ರಶಾಂತ ನಾಯಕ, ಪ್ರಾಧ್ಯಾಪಕರು. | ಸದಸ್ಯರು |
| 16. | ಡಾ. ಜಗನ್ನಾಥ ಕೆ. ಡಾಂಗೆ, ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 17. | ಡಾ. ಗುರುಲಿಂಗಯ್ಯ ಎಂ, ಡೀನರು, ಕಲಾ ನಿಕಾಯ | ಸದಸ್ಯರು |
| 18. | ಡಾ. ಆರ್. ಹಿರೇಮಣಿನಾಯ್ಕ್, ಡೀನರು, ವಾಣಿಜ್ಯ ನಿಕಾಯ | ಸದಸ್ಯರು |
| 19. | ಡಾ. ಜೆ. ನಾರಾಯಣ, ಡೀನರು, ವಿಜ್ಞಾನ ನಿಕಾಯ | ಸದಸ್ಯರು |
| 20. | ಡಾ. ಆರ್.ಹೆಚ್. ವಾಲ್ಮೀಕಿ, ಗ್ರಂಥಪಾಲಕರು, (ಪ್ರಭಾರ) | ಸದಸ್ಯರು |
| 21. | ಡಾ. ಜಿ. ಪ್ರಶಾಂತ ನಾಯಕ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರು | ಸದಸ್ಯರು |
| 22. | ಡಾ. ಆರ್ತೋಬನಾಯಕ ವೈ, ನಿರ್ದೇಶಕರು ಯೋಜನೆ, ಮೇಲ್ವಿಚಾರಣೆ ಮತ್ತು | ಸದಸ್ಯರು |
| 23. | ಡಾ. ನಾಗರಾಜ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್. | ಸದಸ್ಯರು |
| 24. | ಡಾ. ಎನ್.ಡಿ. ವಿರೂಪಾಕ್ಷ, ನಿರ್ದೇಶಕರು ದೈಹಿಕ ಶಿಕ್ಷಣ | ಸದಸ್ಯರು |

ಗೈರುಹಾಜರಾದ ಸದಸ್ಯರು:

| | | |
|---|---|---|
| 1. | ಡಾ. ಕೇಶವ ಹೆಚ್, ಜಂಟಿ ನಿರ್ದೇಶಕರು | ಸದಸ್ಯರು |
| 2. | ಶ್ರೀ ಹೆಚ್.ಡಿ. ತಮ್ಮಯ್ಯ, ಶಾಸಕರು, ಚಿಕ್ಕಮಗಳೂರು ಕ್ಷೇತ್ರ | ಸದಸ್ಯರು |
| 3. | ಶ್ರೀ ಬಿ.ಕೆ. ಸಂಗಮೇಶ್ವರ, ಶಾಸಕರು, ಭದ್ರಾವತಿ | ಸದಸ್ಯರು |
| 4. | ಶ್ರೀ ಡಿ.ಎಸ್. ಅರುಣ್, ಶಾಸಕರು, ಕರ್ನಾಟಕ ವಿಧಾನ ಪರಿಷತ್ | ಸದಸ್ಯರು |
| 5. | ಶ್ರೀ ಸೂರಜ್ ರೇವಣ್ಣ, ಶಾಸಕರು, ಕರ್ನಾಟಕ ವಿಧಾನ ಪರಿಷತ್ | ಸದಸ್ಯರು |
| 6. | ಶ್ರೀ ರಾಜಣ್ಣ ಕೆ. ಪ್ರಾಂಶುಪಾಲರು | ಸದಸ್ಯರು |
| 7. | ಡಾ. ಶಿವಕುಮಾರ್ ಜಿ.ಎಸ್, ಪ್ರಾಂಶುಪಾಲರು | ಸದಸ್ಯರು |
| 8. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 9. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |

10. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. ಸದಸ್ಯರು
11. ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. ಸದಸ್ಯರು

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

1. ಡಾ. ಪಾಟೀಲ್ ಸಂಗನಗೌಡ ಎಸ್., ಪ್ರಾಧ್ಯಾಪಕರು ಸದಸ್ಯರು

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000 ರ ಪ್ರಕರಣ (ix) ರನ್ವಯ ವಿದ್ಯಾವಿಷಯಕ ಪರಿಷತ್ತಿಗೆ ನಾಮನಿರ್ದೇಶಿತರಾದ ವಿಜ್ಞಾನ ನಿಕಾಯದ ಡೀನರಾದ ಡಾ. ಜೆ. ನಾರಾಯಣ ರವರನ್ನು ಹಾಗೂ ಪ್ರಕರಣ (viii)ರನ್ವಯ ಪ್ರಾಧ್ಯಾಪಕರ ಜೇಷ್ಠತೆಯ ಆಧಾರದ ಮೇಲೆ ನಾಮನಿರ್ದೇಶಿತರಾದ ಪ್ರೊ. ಹೆಚ್. ಎನ್. ರಮೇಶ್ ಪ್ರಾಧ್ಯಾಪಕರು, ಎಂ.ಬಿ.ಎ. ವಿಭಾಗ ಇವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ವಿದ್ಯಾವಿಷಯಕ ಪರಿಷತ್ತಿನ ಸದಸ್ಯತ್ವದ ಅವಧಿ ಮುಗಿದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಡೀನರಾದ ಪ್ರೊ. ಎಸ್.ವಿ ಕೃಷ್ಣಮೂರ್ತಿಯವರ ಸೇವೆಯನ್ನು ಸ್ಮರಿಸಲಾಯಿತು ಮತ್ತು ಪ್ರೊ. ಸರ್ವಮಂಗಳ ಜಿ. ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ ಇವರ ಸೇವೆಯನ್ನು ಸ್ಮರಿಸಿ ಅಭಿನಂದನೆ ಸಲ್ಲಿಸಲಾಯಿತು.

## ಹಣಕಾಸು ವಿಭಾಗ

**2025:ಎಸಿ–2.01:** 2025–26ನೇ ಸಾಲಿನ ವಾರ್ಷಿಕ ಆಯ–ವ್ಯಯ ಅಂದಾಜನ್ನು ಅನುಮೋದಿಸುವ ಬಗ್ಗೆ.

**ಚರ್ಚೆ:** ಸಭೆಗೆ ವಿಶೇಷ ಆಹ್ವಾನಿತರಾಗಿದ್ದ, ಹಣಕಾಸು ಅಧಿಕಾರಿಗಳಾದ ಪ್ರೊ. ಹೆಚ್.ಎನ್. ರಮೇಶ್ ರವರು ಮಾತನಾಡಿ, ದಿನಾಂಕ:19-03-2025 ರಂದು ಬೆಂಗಳೂರಿನಲ್ಲಿ ನಡೆದ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಲಾಗಿದ್ದ ವಿಶ್ವವಿದ್ಯಾಲಯದ 2025–26ನೇ ಸಾಲಿನ ವಾರ್ಷಿಕ ಆಯ– ವ್ಯಯ ಅಂದಾಜನ್ನು ಕೆಲವು ಮಾರ್ಪಾಡುಗಳೊಂದಿಗೆ ಅನುಮೋದಿಸಲಾಗಿದ್ದು, ಅದನ್ನು ದಿನಾಂಕ:24–03–2025 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ವಿಶ್ವವಿದ್ಯಾಲಯವು ಪ್ರಸ್ತುತ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದೆ. ರೆಗ್ಯುಲರ್ ಮತ್ತು ದೂರ ಶಿಕ್ಷಣದ ಪ್ರವೇಶದಿಂದ ಆದಾಯದ ಕೊರತೆಯ ನಡುವೆಯೂ, ಶೈಕ್ಷಣಿಕ ಮತ್ತು ಸಂಶೋಧನಾ ಕಾರ್ಯವನ್ನು ಯಥಾವತ್ತಾಗಿ ಮುಂದುವರೆಸಲು ಈ ಆಯ–ವ್ಯಯದಲ್ಲಿ ಪ್ರಯತ್ನಿಸಲಾಗಿದೆ. ಆಡಳಿತಾತ್ಮಕ ವೆಚ್ಚಗಳನ್ನು ಆದಾಯದೊಂದಿಗೆ ಸರಿದೂಗಿಸುವುದು ವಿಶ್ವವಿದ್ಯಾಲಯಕ್ಕೆ ಸವಾಲಾಗಿ ಪರಿಣಮಿಸಿದೆ. ರಾಜ್ಯ ಸರ್ಕಾರದಿಂದ ಹೆಚ್ಚುವರಿ ಅನುದಾನದ ಬಿಡುಗಡೆ, ಆಡಳಿತಾತ್ಮಕ ವೆಚ್ಚಗಳ ಕಡಿತ, ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಭರ್ತಿ, ಕಾರ್ಯಭಾರಕ್ಕೆ ಅನುಗುಣವಾಗಿ ಹೆಚ್ಚುವರಿ ಅತಿಥಿ ಉಪನ್ಯಾಸಕರು ಮತ್ತು ಹೊರಗುತ್ತಿಗೆ ಹುದ್ದೆಗಳನ್ನು ಕಡಿತ ಮಾಡುವುದು ಹಾಗೂ ಪರಿನಿಯಮಗಳಿಗೆ ಸರ್ಕಾರದ ಅನುಮೋದನೆ ಪಡೆಯಲು ಕ್ರಮ ಕೈಗೊಳ್ಳಲಾಗಿದೆ. 2025–26ನೇ ಸಾಲಿನಲ್ಲಿ ಯಾವುದೇ ಹೊಸ ಕಾಮಗಾರಿಗಳನ್ನು ಕೈಗೊಳ್ಳದೆ, ಮುಂದುವರೆದ ಕಾಮಾಗಾರಿಗಳನ್ನು ಪೂರ್ಣಗೊಳಿಸಲು ರಾಜ್ಯ ಸರ್ಕಾರಕ್ಕೆ ಹೆಚ್ಚುವರಿ ಅನುದಾನ ಕೋರಲಾಗುವುದು ಎಂಬ ಮಾಹಿತಿಯೊಂದಿಗೆ ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ವಿವರಗಳನ್ನು ಒದಗಿಸುತ್ತಾ ರೂ.13384.84 ಲಕ್ಷಗಳ ಸ್ವೀಕೃತಿ ಮತ್ತು ರೂ.17110.93 ಲಕ್ಷಗಳ ವೆಚ್ಚಗಳನ್ನು ಅಂದಾಜಿಸಲಾದ, ರೂ.3726.12 ಲಕ್ಷಗಳ ಕೊರತೆ ಬಜೆಟ್‌ನ್ನು ವಿಶೇಷ ವಿದ್ಯಾವಿಷಯಕ ಪರಿಷತ್ತಿನ ಅನುಮೋದನೆಗಾಗಿ ಸಭೆಗೆ ಮಂಡಿಸಿದರು.

ಪ್ರೊ. ವೈ. ಆತೋರ್ಂಬನಾಯಕ, ರವರು ಮಾತನಾಡಿ, ದೂರ ಶಿಕ್ಷಣದಿಂದ ರೂ.10.00 ಲಕ್ಷಗಳು ಮಾತ್ರ ಸ್ವೀಕೃತಿ ನಿರೀಕ್ಷಿಸಿ, ವೆಚ್ಚದ ಬಾಬ್ತು ರೂ.100.00 ಲಕ್ಷಗಳನ್ನು ತೋರಿಸಲಾಗಿದೆ. ಹೆಚ್ಚುವರಿ ವೆಚ್ಚವನ್ನು ರೆಗ್ಯುಲರ್ ವಿದ್ಯಾರ್ಥಿಗಳು ಪಾವತಿಸುವ ಶುಲ್ಕದಿಂದ ಭರಿಸುವುದು ಸರಿಯಲ್ಲ ಎಂದರು. ಪ್ರೊ.ಆರ್.ಹಿರೇಮಣಿನಾಯ್ಕ ರವರು ಮಾತನಾಡಿ, ಸ್ವೀಕೃತಿಯನ್ನು ರೂ.10.00 ಲಕ್ಷಗಳು ಎಂದು ತೋರಿಸಿರುವುದು ಬಹಳ ಕಡಿಮೆಯಾಯ್ತು. ಆದರೆ, ನೈಜವಾಗಿ ಸ್ವೀಕೃತಿ ಜಾಸ್ತಿ ಇದೆ. ದೂರ ಶಿಕ್ಷಣದ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಪರೀಕ್ಷೆ ನಡೆಸಿ ಫಲಿತಾಂಶ ನೀಡಿದಲ್ಲಿ ಹೆಚ್ಚು ಆದಾಯ ಬರುತ್ತದೆ ಎಂದರು. ಪ್ರೊ. ಜಿ. ಪ್ರಶಾಂತನಾಯಕ ರವರು ಮಾತನಾಡಿ, ದೂರ ಶಿಕ್ಷಣ ನಿರ್ದೇಶನಾಲಯವನ್ನು ಬಲಪಡಿಸಬೇಕೆಂದು ಕಳೆದ ಮೂರ್ನಾಲ್ಕು ವರ್ಷಗಳಿಂದ ಮಾತನಾಡುತ್ತಿದ್ದೇವೆ. ಆದರೆ, ಈವರೆಗೆ ಯಾವುದೇ ಅಭಿವೃದ್ಧಿ ಆಗಿಲ್ಲ. ಆನ್‌ಲೈನ್ ಕೋರ್ಸ್‌ಗಳಿಗೆ ಈಗಲೂ ದೇಶ ವಿದೇಶಗಳಿಂದ ಬೇಡಿಕೆ ಇದೆ. ಸಕಾಲದಲ್ಲಿ ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಿಸಿದಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಪ್ರವೇಶ ಪಡೆದು ಆಂತರಿಕ ಸಂಪನ್ಮೂಲ ವೃದ್ಧಿಸುತ್ತದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಆನ್‌ಲೈನ್ ಕೋರ್ಸ್‌ಗಳನ್ನು ಮುಂದುವರಿಸುವುದು ವಿಶ್ವವಿದ್ಯಾಲಯವು ಪಡೆಯುವ ನ್ಯಾಕ್ ಗ್ರೇಡ್ ಹಾಗೂ ಎನ್.ಐ.ಆರ್.ಎಫ್. ರ‍್ಯಾಂಕಿಂಗ್‌ಗಳ ಮೇಲೆ ಅವಲಂಬಿತವಾಗಿದೆ. ಈ ಎರಡೂ ಉತ್ತಮವಾಗಿ ಬಂದಲ್ಲಿ, ದೂರ ಶಿಕ್ಷಣದ ಆನ್‌ಲೈನ್ ಕೋರ್ಸ್‌ಗಳ ಕುರಿತಾಗಿ ಒಂದು ಸಮಿತಿಯನ್ನು ರಚಿಸಿ, ಚರ್ಚಿಸಿ, ನಿರ್ಣಯಿಸಿ ಕೋರ್ಸ್‌ನ್ನು ಉತ್ತಮವಾಗಿ ನಡೆಸಬಹುದು ಎಂದರು.

ದೂರ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರೂ ಆಗಿರುವ ಪ್ರೊ.ಜಗನ್ನಾಥ ಕೆ. ಡಾಂಗೆ ರವರು ಮಾತನಾಡಿ, ಪರೀಕ್ಷಾ ವಿಭಾಗದಲ್ಲಿ ದ್ವಿಗುಣ ಅವಧಿ ಮುಗಿದ ವಿದ್ಯಾರ್ಥಿಗಳಿಗೆ ವಿಶೇಷ ಸಂದರ್ಭವೆಂದು ಪರಿಗಣಿಸಿ, ಅನುತ್ತೀರ್ಣರಾಗಿರುವ ಪತ್ರಿಕೆಗಳ ಪರೀಕ್ಷೆ ಬರೆಯಲು ಅನುಮತಿ ನೀಡುತ್ತಾರೆ. ಹಾಗೆಯೇ ಮಾನಿಟರಿಂಗ್ ಸಮಿತಿ ಸಭೆಯ ನಿರ್ಣಯದ ಪ್ರಕಾರ ದೂರ ಶಿಕ್ಷಣದಲ್ಲಿ ಪ್ರವೇಶ ಪಡೆದಿರುವ ಕೆಲವು ವಿದ್ಯಾರ್ಥಿಗಳು, ಪ್ರಥಮ/ದ್ವಿತೀಯ ವರ್ಷ ಪೂರ್ಣಗೊಳಿಸಿದ್ದು, ವೈಯಕ್ತಿಕ ಕಾರಣಗಳು ಮತ್ತು ಕೋವಿಡ್ ಸೇರಿದಂತೆ ವಿವಿಧ ಕಾರಣಗಳಿಂದಾಗಿ ಬಾಕಿ ಉಳಿದಿರುವ ವರ್ಷಕ್ಕೆ ವಿಶೇಷ ಸಂದರ್ಭವೆಂದು ಪರಿಗಣಿಸಿ, ಅವರಿಗೆ ಮುಂದಿನ ತರಗತಿಗೆ ಪ್ರವೇಶ ನೀಡಲು ದೂರ ಶಿಕ್ಷಣದ ಮಾನಿಟರಿಂಗ್ ಸಮಿತಿ ಸಭೆಯಲ್ಲಿ ನಿರ್ಣಯಿಸಿದೆ. ಅಂತಹ ಸುಮಾರು 4500 ವಿದ್ಯಾರ್ಥಿಗಳಿದ್ದು, ಅವರಿಗೆ ಪ್ರವೇಶ ಪಡೆಯುವಂತೆ ಇ-ಮೇಲ್ ಹಾಗೂ ಮೊಬೈಲ್ ಮೂಲಕ ತಿಳಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳು ಪದವಿ ಪೂರ್ಣಗೊಳಿಸಲು ಅನುಕೂಲವಾಗುತ್ತದೆ ಮತ್ತು ವಿಶ್ವವಿದ್ಯಾಲಯಕ್ಕೆ ಕೂಡ ಸುಮಾರು ರೂ.4.5 ಕೋಟಿಗಳಷ್ಟು ಆಂತರಿಕ ಸಂಪನ್ಮೂಲ ಬರುತ್ತದೆ. ಅವರಿಗೆ ನೀಡಲು ಅಗತ್ಯವಿರುವ ಸ್ಟಡಿ ಮೆಟೀರಿಯಲ್ ಕೂಡ ಲಭ್ಯವಿದ್ದು, ಅದನ್ನು ಹೊಸದಾಗಿ ಮುದ್ರಿಸುವ ಅಗತ್ಯವಿಲ್ಲ. ಇದಲ್ಲದೇ ಆನ್‌ಲೈನ್ ಮೂಲಕ ಪ್ರವೇಶ ಬಯಸಿರುವ ವಿದ್ಯಾರ್ಥಿಗಳಿಗೆ ಹಣ ಪಾವತಿಸಲು ಅವಕಾಶ ನೀಡಿದಲ್ಲಿ ರೂ.1.5 ಕೋಟಿ ಶುಲ್ಕದ ರೂಪದಲ್ಲಿ ಬರಲಿದ್ದು, ಸದರಿ ಮೊಬಲಗು ನೇರವಾಗಿ ವಿಶ್ವವಿದ್ಯಾಲಯದ ಖಾತೆಗೆ ಜಮೆಯಾಗುತ್ತದೆ ಇದರಿಂದ ಆಯವ್ಯಯದಲ್ಲಿನ ಕೊರತೆಯನ್ನು ಕಡಿಮೆ ಮಾಡಬಹುದು ಎಂದರು. ಪ್ರೊ. ಜಿ. ಪ್ರಶಾಂತನಾಯಕ ರವರು ಮಾತನಾಡಿ ಅಂತಹ ವಿದ್ಯಾರ್ಥಿಗಳು ಮತ್ತೆ ಅಧ್ಯಯನ ಕೇಂದ್ರಗಳ ಮೂಲಕ ಬರುವುದು ಬೇಡ. ಅವರಿಗೆ ವಿಶ್ವವಿದ್ಯಾಲಯಲದ ವತಿಯಿಂದಲೇ ನೇರವಾಗಿ ಮರು ಪ್ರವೇಶ ನೀಡಿ ಪರೀಕ್ಷೆ ನಡೆಸಿದರೆ ಒಳ್ಳೆಯದು ಎಂದರು.

ಪ್ರೊ.ಆರ್.ಹಿರೇಮಣಿನಾಯ್ಕ ರವರು ಮಾತನಾಡಿ, ದೂರ ಶಿಕ್ಷಣದಿಂದ ಹೆಚ್ಚುವರಿ ಆದಾಯ ಬರುವುದಿದ್ದಲ್ಲಿ, ಅದನ್ನು ಆಂತರಿಕ ಸಂಪನ್ಮೂಲಕ್ಕೆ ಸೇರ್ಪಡೆಗೊಳಿಸಿ, ಆಯವ್ಯಯವನ್ನು ಪರಿಷ್ಕರಿಸಬಹುದು ಎಂದರು. ಕುಲಸಚಿವರು ಮಾತನಾಡಿ ಆಂತರಿಕ ಸಂಪನ್ಮೂಲ ಬರಬಹುದೆಂಬ ನಿರೀಕ್ಷೆ ಇಟ್ಟುಕೊಂಡು ಈಗ ಆಯವ್ಯಯವನ್ನು ಪರಿಷ್ಕರಿಸಲು ಆಗುವುದಿಲ್ಲ. ಮುಂದಿನ ದಿನಗಳಲ್ಲಿ

ಸೂಚಿಸುವ ಕಾರ್ಯಗಳು.

ಸದರಿ ಸ್ವೀಕೃತಿ ಬರುವುದು ಖಾತ್ರಿಯಾದಲ್ಲಿ Supplimentary Budget ಮಾಡಬಹುದಾಗಿದ್ದು, ಆಯವ್ಯಯದಲ್ಲಿನ ಕೊರತೆ ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತದೆ. ಸರ್ಕಾರದಿಂದ ಬರಬೇಕಾಗಿರುವ ಹೆಚ್ಚುವರಿ ಅನುದಾನದ ಬಗ್ಗೆ Footnote ನಲ್ಲಿ ಸೇರ್ಪಡೆಗೊಳಿಸಬಹುದು ಎಂದರು.

**ನಿರ್ಣಯ:** ಸುಧೀರ್ಘವಾಗಿ ಚರ್ಚಿಸಿದ ನಂತರ, ವಿಶ್ವವಿದ್ಯಾಲಯದ 2025–26ನೇ ಸಾಲಿನ ವಾರ್ಷಿಕ ಆಯ–ವ್ಯಯ ಅಂದಾಜನ್ನು ಅನುಮೋದಿಸಿದ ಸಭೆಯು, ಸದಸ್ಯರುಗಳು ನೀಡಿರುವ ಸಲಹೆಯಂತೆ ಆಂತರಿಕ ಸಂಪನ್ಮೂಲ ಹೆಚ್ಚಿಸುವ ಸಲುವಾಗಿ ಸಂಪನ್ಮೂಲ ಕ್ರೋಢೀಕರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ನಿರ್ಣಯಿಸಿತು.

**2025:ಎಸಿ–2.02:** 2021–22ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳ ಅನುಪಾಲನಾ ವರದಿಯ ಅನುಮೋದನೆ ಕುರಿತು.

**ಚರ್ಚೆ:** ಹಣಕಾಸು ಅಧಿಕಾರಿಗಳು 2021–22ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಯನ್ನು ಅನುಮೋದನೆಗೆ ಮಂಡಿಸಿ ಮಾತನಾಡಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000 ಕಲಂ–47, ಉಪಕಲಂ(4) ರ ಪ್ರಕಾರ ಕರ್ನಾಟಕ ಸರ್ಕಾರದ ರಾಜ್ಯ ಲೆಕ್ಕಪರಿಶೋಧನೆ ಮತ್ತು ಮತ್ತು ಲೆಕ್ಕಪತ್ರ ಇಲಾಖೆಯಿಂದ ಲೆಕ್ಕಪರಿಶೋಧನೆ ನಡೆಸಿ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಗೆ ವಿಶ್ವವಿದ್ಯಾಲಯದ ಅನುಪಾಲನಾ ವರದಿಯನ್ನು ಸಿದ್ಧಪಡಿಸಿ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಗೆ ಅನುಮೋದನೆಗಾಗಿ ಮಂಡಿಸಿದೆ. ಸಭೆಯ ಅನುಮೋದನೆ ನಂತರ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ 2021–22ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು.

## ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ

**2025:ಎಸಿ–2.03:** ಕಾಲೇಜುಗಳ 2025–26ನೇ ಸಾಲಿನ ಸಂಯೋಜನೆ ವರದಿಗಳನ್ನು ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗೆ ಮಂಡಿಸುವ ಬಗ್ಗೆ.

**ಚರ್ಚೆ:** ಕುವೆಂಪು ವಿಶ್ವವಿದ್ಯಾಲಯದ 2025–26ನೇ ಸಾಲಿನ ಪದವಿ ಕಾಲೇಜುಗಳ ಸಂಯೋಜನಾ ಪ್ರಕ್ರಿಯೆಗಳನ್ನು ದಿನಾಂಕ:31–12–2024 ರಿಂದ ಆರಂಭಿಸಿ ದಿನಾಂಕ:03–02–2025 ರಂದು ಸಿ.ಡಿ.ಸಿ. ವಿಭಾಗದಿಂದ ಪೂರ್ಣಗೊಳಿಸಲಾಗಿರುತ್ತದೆ. ಸದರಿ ಎಲ್.ಐ.ಸಿ. ಸ್ಕೋರ್ ಕಾರ್ಡ್ ವರದಿಗಳನ್ನು ತುರ್ತಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು U.U.C.M.S ಮೂಲಕ ಸಲ್ಲಿಸಬೇಕಾಗಿರುವುದರಿಂದ ಈ ವಿಷಯವನ್ನು ದಿನಾಂಕ:07–03–2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗೆ ಮಂಡಿಸಲಾಗಿತ್ತು. ಈ ಕುರಿತಂತೆ ಸಿಂಡಿಕೇಟ್ ಸಾಮಾನ್ಯ ಸಭೆಯು ತನ್ನ ಅನುಮೋದನೆಯನ್ನು ನೀಡಿರುತ್ತದೆ. ಈ ವಿಷಯವನ್ನು ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗುತ್ತಿದೆ ಎಂದು ಸಿ.ಡಿ.ಸಿ. ನಿರ್ದೇಶಕರು ತಿಳಿಸಿದರು. ನಂತರ ಮಾತನಾಡಿದ ಸನ್ಮಾನ್ಯ ಕುಲಸಚಿವರು ಈ ಬಗ್ಗೆ ಸಭೆಯು ಅನುಮೋದನೆ ನೀಡಬೇಕೆಂದು ಕೋರಿದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ 2025–26ನೇ ಸಾಲಿನ ಸಂಯೋಜನಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದಿಸಿತು.

2025:ಎಸಿ–2.04: 2024–25ನೇ ಸಾಲಿಗೆ ಬಿ.ಇಡಿ. ಪದವಿಗೆ ಮುಂದುವರಿಕೆ ಸಂಯೋಜನೆ ಮತ್ತು ಕಾಲೇಜಿನ ಸ್ಥಳ ಬದಲಾವಣೆಗೆ ಅನುಮತಿ ನೀಡುವ ಬಗ್ಗೆ.

**ಚರ್ಚೆ:** ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕರಾದ ಪ್ರೊ.ನಾಗರಾಜ ರವರು ವಿಷಯ ಮಂಡಿಸಿ ಮಾತನಾಡಿ, ಚಿಕ್ಕಮಗಳೂರು ನಗರದಲ್ಲಿರುವ ಎ.ವಿ.ಎಸ್. ಶಿಕ್ಷಣ ಮಹಾವಿದ್ಯಾಲಯ 2024–25ನೇ ಸಾಲಿನ ಮುಂದುವರಿಕೆ ಸಂಯೋಜನೆಗೆ ಸಂಬಂಧಪಟ್ಟಂತೆ, ಕಾಲೇಜಿಗೆ ಜಮೀನಿನ ಮಾಲೀಕತ್ವ ಇಲ್ಲದ ಕಾರಣದಿಂದ ಸ್ಥಳೀಯ ತಪಾಸಣಾ ಸಮಿತಿಯು ನಿಯಮದ ಪ್ರಕಾರ ಮುಂದುವರಿಕೆ ಸಂಯೋಜನೆಗೆ ಶಿಫಾರಸ್ಸು ಮಾಡಿರಲಿಲ್ಲ. ನಂತರದಲ್ಲಿ ಕಾಲೇಜಿನ ಆಡಳಿತ ಮಂಡಳಿಯವರು ಸಂಸ್ಥೆಯು ಬೇರೆ ಕಟ್ಟಡವನ್ನು 30 ವರ್ಷಗಳ ಒಪ್ಪಂದದ ಕ್ರಯಪತ್ರ ಸಲ್ಲಿಸಿ ಮರು ಸಂಯೋಜನೆಗೆ ಕೋರಿತ್ತು. ಇದನ್ನು ಸರ್ಕಾರದ ಅವಗಾಹನೆಗೆ ತರುವುದರ ಮೂಲಕ ಕಾಲೇಜನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರ ಮಾಡಿರುವುದರಿಂದ ಮರು ತಪಾಸಣೆ ನಡೆಸಿ ಮುಂದುವರಿಕೆ ಸಂಯೋಜನೆ ನೀಡಲು ಅನುಮತಿ ಕೋರಲಾಗಿತ್ತು. ಸರ್ಕಾರವು ಅನುಮತಿ ನೀಡಿದ ನಂತರ ದಿನಾಂಕ:15–01–2025 ರಂದು ಸ್ಥಳೀಯ ತಪಾಸಣಾ ಸಮಿತಿಯು ಕಾಲೇಜಿಗೆ ಭೇಟಿ ನೀಡಿ ಸಲ್ಲಿಸಿದ್ದ ವರದಿಯನ್ನು ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ, ಕಾಲೇಜಿನ ಸ್ಥಳ ಬದಲಾವಣೆಗೆ ಅನುಮತಿ ಮತ್ತು ಮುಂದುವರಿಕೆ ಸಂಯೋಜನೆಗೆ ಅನುಮತಿ ನೀಡುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. ಇದನ್ನು ಸಭೆಯ ಅನುಮೋದನೆಗೆ ಮಂಡಿಸಿದರು. ಪ್ರೊ.ಜಗನ್ನಾಥ ಕೆ. ಡಾಂಗೆ ರವರು ಮಾತನಾಡಿ, ಎನ್.ಸಿ.ಟಿ.ಇ. ನಿಯಮಗಳ ಪ್ರಕಾರ ಬಿ.ಇಡಿ. ಕಾಲೇಜುಗಳ ಹೆಸರು ಬದಲಾವಣೆ ಹಾಗೂ ಸ್ಥಳ ಬದಲಾವಣೆಗೆ ಎನ್.ಸಿ.ಟಿ.ಇ. ಅನುಮತಿ ಅಗತ್ಯ ಎಂದರು. ಪ್ರೊ. ನಾಗರಾಜ ರವರು ಮಾತನಾಡಿ ಸದರಿ ಕಾಲೇಜಿನವರು ಈಗಾಗಲೇ ಎನ್.ಸಿ.ಟಿ.ಇ. ಅನುಮತಿ ಪಡೆದುಕೊಂಡಿದ್ದಾರೆ ಎಂದರು.

**ನಿರ್ಣಯ:** ಚರ್ಚೆಯ ನಂತರ ಚಿಕ್ಕಮಗಳೂರು ನಗರದಲ್ಲಿರುವ ಎ.ವಿ.ಎಸ್. ಶಿಕ್ಷಣ ಮಹಾವಿದ್ಯಾಲಯಕ್ಕೆ 2024–25ನೇ ಸಾಲಿನ ಮುಂದುವರಿಕೆ ಸಂಯೋಜನೆಗೆ ಮತ್ತು ಕಾಲೇಜಿನ ಸ್ಥಳ ಬದಲಾವಣೆಗೆ ಮಂಜೂರಾತಿ ನೀಡಲು ಸಭೆಯು ನಿರ್ಣಯಿಸಿತು.

**2025:ಎಸಿ–2.04: ಅಧ್ಯಕ್ಷರ ಅಪ್ಪಣೆಯ ಮೇರೆಗೆ**

**2025:ಎಸಿ–2.04.1(ಎ): <u>ಡಾ.ಜಿ.ಎಂ. ಗಣೇಶ್:</u> ಖಾಯಂ ಸಂಯೋಜನೆ ಕುರಿತು.**

ಚಿಕ್ಕಮಗಳೂರಿನ ಎಂ.ಎಲ್.ಎಂ.ಎನ್. ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಜಿ.ಎಂ. ಗಣೇಶ್‌ರವರು ಮಾತನಾಡಿ, ತಮ್ಮ ಕಾಲೇಜು 1981ರಲ್ಲಿ ಸ್ಥಾಪಿತಗೊಂಡಿದ್ದು, ದಿನಾಂಕ:01–01–1995 ರಿಂದ ವೇತನಾನುದಾನಕ್ಕೆ ಒಳಪಟ್ಟಿದ್ದು ಎನ್.ಸಿ.ಟಿ.ಇ. ಅನುಮೋದನೆ ಹಾಗೂ ಕುವೆಂಪು ವಿಶ್ವವಿದ್ಯಾಲಯದ ಶಾಶ್ವತ ಸಂಯೋಜನೆಯನ್ನು ಪಡೆದಿದೆ. 2024–25ನೇ ಶೈಕ್ಷಣಿಕ ಸಾಲಿಗೆ ಶಾಶ್ವತ ಸಂಯೋಜನೆಯ ನವೀಕರಣಕ್ಕೆ ಅರ್ಜಿ ಸಲ್ಲಿಸಿದ್ದು, ಸರ್ಕಾರವು ಅಗ್ನಿ ಸುರಕ್ಷತೆ, ಕಟ್ಟಡ ಸುರಕ್ಷತೆ ಹಾಗೂ ನ್ಯಾಕ್ ಮಾನ್ಯತೆ ಇಲ್ಲವೆಂದು ಶಾಶ್ವತ ಸಂಯೋಜನೆಯ ನವೀಕರಣವನ್ನು ತಿರಸ್ಕರಿಸಿದೆ. ನಂತರ ಸರ್ಕಾರ ಆಕ್ಷೇಪಿಸಿರುವ ಅಂಶಗಳನ್ನು ಕಾಲೇಜು ಪೂರೈಸಿ ದಾಖಲೆಗಳನ್ನು ಒದಗಿಸಿರುತ್ತದೆ. ಆದರೂ ಕೂಡ ನ್ಯಾಕ್ ಮಾನ್ಯತೆಯ ಪ್ರಮಾಣಪತ್ರ ಇಲ್ಲವೆಂಬ ಒಂದೇ ಕಾರಣಕ್ಕೆ ಶಾಶ್ವತ ಸಂಯೋಜನೆ ಪ್ರಸ್ತಾವನೆಯನ್ನು ತಿರಸ್ಕರಿಸಿ, ತಾತ್ಕಾಲಿಕ ಸಂಯೋಜನೆಯನ್ನು ನೀಡಲು ಮುಂದಾಗಿದೆ. ಆದರೆ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು–2), ಕರ್ನಾಟಕ ಸರ್ಕಾರ, ಬೆಂಗಳೂರು ಸುತ್ತೋಲೆ ಸಂಖ್ಯೆ: ಇಡಿ 119 ಯುಆರ್‌ಸಿ 2021 ದಿನಾಂಕ:05–08–2021 ರಲ್ಲಿ "ವಿಶ್ವವಿದ್ಯಾಲಯ ಧನಸಹಾಯ ಆಯೋಗದ

(ಯು.ಜಿ.ಸಿ.) ಸೂಚನೆಗಳನ್ವಯ ಶಾಶ್ವತ ಸಂಯೋಜನೆ ನೀಡಲು ನ್ಯಾಕ್ ಪ್ರಮಾಣಪತ್ರದ ಅವಶ್ಯಕತೆ ಇರುವುದಿಲ್ಲವೆಂದು ತಿಳಿಸಿರುತ್ತದೆ. ಆದಾಗ್ಯೂ ಕಾಲೇಜಿನಲ್ಲಿ ನ್ಯಾಕ್ ಮರು ಮಾನ್ಯತೆಗೆ ಸಿದ್ಧತೆಗಳನ್ನು ನಡೆಸುತ್ತಿದ್ದು, ಈಗಾಗಲೇ 05 ವರ್ಷಗಳ ಎ.ಕ್ಯೂ.ಎ.ಆರ್. ರಿಪೋರ್ಟ್‌ನ್ನು ಸಲ್ಲಿಸಲಾಗಿದೆ. ಮತ್ತೊಂದು ಸರ್ಕಾರಿ ಆದೇಶ ಸಂಖ್ಯೆ:ಇಡಿ 29 ಯುಎನ್‌ಇ 2021, ಬೆಂಗಳೂರು, ದಿನಾಂಕ:12-02-2021ರಲ್ಲಿ "ಈ ಹಿಂದಿನ ಮೂರು ವರ್ಷಗಳಲ್ಲಿ ಶಾಶ್ವತ ಸಂಯೋಜನೆಯಾಗಿರುವ ಕಾಲೇಜುಗಳು ಪ್ರಸಕ್ತ ಸಾಲಿನಲ್ಲಿ Defined parameters ನ 08 ಅಂಶಗಳನ್ನು ಪೂರ್ಣಗೊಳಿಸದೇ ಇದ್ದರೆ, ಮುಂದಿನ 2 ವರ್ಷಗಳಲ್ಲಿ Defined parameters ಗಳನ್ನು ಪೂರ್ಣಗೊಳಿಸುವ ನಿಬಂಧನೆಗೆ ಒಳಪಡಿಸಿ ಸಂಯೋಜನೆ ನೀಡಬಹುದು" ಎಂದು ತಿಳಿಸಿರುತ್ತಾರೆ. ಅಲ್ಲದೇ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 62(4)ರಲ್ಲಿ "ಸಂಬಂಧಪಟ್ಟ ಕಾಲೇಜಿಗೆ ಒಂದು ಅವಕಾಶವನ್ನು ಕೊಟ್ಟ ಹೊರತು ಖಾಯಂ ಸಂಯೋಜನೆಯನ್ನು ರದ್ದುಗೊಳಿಸತಕ್ಕದ್ದಲ್ಲ" ಎಂಬುದು ಕೂಡ ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ಕಾಲೇಜಿನ ಪ್ರಕರಣವನ್ನು ಮತ್ತೊಮ್ಮೆ ಮರುಪರಿಶೀಲಿಸಬೇಕೆಂದರು.

ಕಾಲೇಜು ಅಭಿವೃದ್ಧಿ ಪರಿಷತ್‌ನ ನಿರ್ದೇಶಕರಾದ ಪ್ರೊ.ನಾಗರಾಜ ರವರು ಮಾತನಾಡಿ, ಈಗ ಯು.ಯು.ಸಿ.ಎಂ.ಎಸ್.ಸಲ್ಲಿ ಸಂಯೋಜನೆ ಪ್ರಕ್ರಿಯೆ ಆಗುತ್ತಿರುವುದರಿಂದ ಇದರಲ್ಲಿ ವಿಶ್ವವಿದ್ಯಾಲಯದ ಪಾತ್ರ ಇರುವುದಿಲ್ಲ ಎಂದರು.

ಈ ಬಗ್ಗೆ ಚರ್ಚಿಸಿದ ನಂತರ, ಯು.ಜಿ.ಸಿ. ನಿಯಮಾವಳಿಗಳು, ಸರ್ಕಾರದ ಸುತ್ತೋಲೆಗಳು ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ದ ಪ್ರಕರಣ 62(4)ರಂತೆ ಚಿಕ್ಕಮಗಳೂರಿನ ಎಂ.ಎಲ್.ಎಂ.ಎನ್. ಶಿಕ್ಷಣ ಮಹಾವಿದ್ಯಾಲಯದ ಶಾಶ್ವತ ಸಂಯೋಜನೆ ನವೀಕರಣದ ಪ್ರಸ್ತಾವನೆಯನ್ನು ಸಂಬಂಧಿಸಿದ ಕಾಲೇಜಿನಿಂದ ಮನವಿ ಪತ್ರ ಪಡೆದು ಪುನರ್ ಪರಿಶೀಲಿಸುವಂತೆ ಸರ್ಕಾರಕ್ಕೆ ಪತ್ರ ಬರೆಯಬೇಕೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು.

5:ಎಸಿ-2.04.1(ಎ): **<u>ಡಾ.ಜಿ.ಎಂ. ಗಣೇಶ್:</u> ಬಿ.ಇಡಿ., ವಿದ್ಯಾರ್ಥಿಗಳಿಗೆ ಅಂತರ ಕಾಲೇಜು ವರ್ಗಾವಣೆಗೆ ಅವಕಾಶವಿಲ್ಲದಿರುವ ಬಗ್ಗೆ.**

ಡಾ.ಜಿ.ಎಂ.ಗಣೇಶ್ ರವರು ಮಾತನಾಡಿ, ನಿಯಮಾವಳಿಗಳ ಪ್ರಕಾರ ಬಿ.ಇಡಿ. ವಿದ್ಯಾರ್ಥಿಗಳಿಗೆ ಒಂದು ಕಾಲೇಜಿನಿಂದ ಇನ್ನೊಂದು ಕಾಲೇಜಿಗೆ ವರ್ಗಾವಣೆಗೆ ಅವಕಾಶವಿಲ್ಲ. ಆದರೆ, ವಿಶ್ವವಿದ್ಯಾಲಯವು ವರ್ಗಾವಣೆಗೆ ಅನುಮತಿ ನೀಡುತ್ತಿದೆ. ಹೀಗೆ ಅನುಮತಿ ನೀಡುವುದಾದಲ್ಲಿ ನಿಯಮಗಳಿಗೆ ತಿದ್ದುಪಡಿ ತರಬೇಕಾಗುತ್ತದೆ ಎಂದರು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ವರ್ಗಾವಣೆಗೆ ಯು.ಯು.ಸಿ.ಎಂ.ಎಸ್.ನಲ್ಲಿ ಅವಕಾಶ ನೀಡಿದ್ದಾರೆ. ವರ್ಗಾವಣೆಯಿಂದ ವಿದ್ಯಾರ್ಥಿಗಳ ಫಲಿತಾಂಶಕ್ಕೆ ಬಹಳ ತೊಂದರೆಯಾಗುತ್ತಿದೆ ಎಂದರು.

2025:ಎಸಿ-2.04.2: **<u>ಡಾ. ಎನ್.ಕೆ. ಚಿದಾನಂದ:</u>** ಬಿ.ಇಡಿ. ಕೋರ್ಸ್ ಪೂರ್ಣಗೊಳಿಸಲು ಅವಕಾಶ ನೀಡುವ ಕುರಿತು.

ಪ್ರಾಂಶುಪಾಲರಾದ ಡಾ. ಎನ್.ಕೆ. ಚಿದಾನಂದ ರವರು ಮಾತನಾಡಿ ಬಿ.ಇಡಿ. ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ವಿವಿಧ ಸೆಮಿಸ್ಟರ್‌ಗಳಲ್ಲಿ ಹಾಜರಾತಿ ಕೊರತೆ ಸೇರಿದಂತೆ ಕೆಲವು ಕಾರಣಗಳಿಂದಾಗಿ ಕೋರ್ಸ್‌ನ್ನು ಪೂರ್ಣಗೊಳಿಸಲು ಸಾಧ್ಯವಾಗದಂತಹ ವಿದ್ಯಾರ್ಥಿಗಳಿಗೆ, ಯಾವ ಸೆಮಿಸ್ಟರ್‌ಗೆ ಕೋರ್ಸ್ ಸ್ಥಗಿತಗೊಂಡಿದೆಯೋ, ಆ ಸೆಮಿಸ್ಟರ್‌ಗೆ ಪುನ: ಪ್ರವೇಶ ಪಡೆದುಕೊಂಡು ಪರೀಕ್ಷೆ ಬರೆದು ಬಿ.ಇಡಿ. ಪದವಿ ಪೂರ್ಣಗೊಳಿಸಲು ಅವಕಾಶ ನೀಡಿದಲ್ಲಿ ಬಹಳ ವಿದ್ಯಾರ್ಥಿಗಳಿಗೆ

ಅನುಕೂಲವಾಗುತ್ತದೆ. ಇದಕ್ಕೆ ರೆಗ್ಯುಲೇಷನ್‌ನಲ್ಲಿಯೇ ಅವಕಾಶ ಮಾಡಿಕೊಡಬೇಕಾಗುತ್ತದೆ. ಆದುದರಿಂದ ಇದನ್ನು ಸಹಾನುಭೂತಿಯಿಂದ ಪರಿಶೀಲಿಸುವಂತೆ ಕೋರಿದರು.

ಕುಲಸಚಿವ (ಮೌಲ್ಯಮಾಪನ) ರವರು ಮಾತನಾಡಿ ರೆಗ್ಯುಲೇಷನ್ ಮತ್ತು ಯು.ಯು.ಸಿ.ಎಂ.ಎಸ್. ನಲ್ಲಿ ಅವಕಾಶವಿರುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

**2025:ಎಸಿ–2.04.3:** __ಡಾ. ಬಿ.ಜಿ.ಚನ್ನಪ್ಪ:__ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ ಹೆಚ್ಚಿಸುವ ಕುರಿತು.

ಶಿವಮೊಗ್ಗದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಜಿ. ಚನ್ನಪ್ಪ ರವರು ಮಾತನಾಡಿ ಸರ್ಕಾರದಿಂದ ಪತ್ರ ಬಂದಿದ್ದು, ಅದರಲ್ಲಿ ಕಳೆದ ಮೂರು ವರ್ಷಗಳಿಂದ ಪದವಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಕಡಿಮೆಯಾಗುತ್ತಿದ್ದು, ಅದನ್ನು ಹೆಚ್ಚಿಸುವಂತೆ ತಿಳಿಸಿರುತ್ತಾರೆ. ಈಗ ಯು.ಯು.ಸಿ.ಎಂ.ಎಸ್. ಮೂಲಕ ಪ್ರವೇಶ ನೀಡುತ್ತಿರುವುದರಿಂದ ಕಷ್ಟವಾಗುತ್ತಿದೆ. ಕೆಲವು ಪ್ರಕರಣಗಳಲ್ಲಿ ಆಫ್‌ಲೈನ್ ಮೂಲಕ ಪ್ರವೇಶಕ್ಕೆ ಅವಕಾಶ ನೀಡಿದಲ್ಲಿ ಅನುಕೂಲವಾಗುತ್ತದೆ ಎಂದರು. ಮುಂದುವರೆದು ಮಾತನಾಡಿದ ಅವರು ಶೈಕ್ಷಣಿಕ ವೇಳಾಪಟ್ಟಿಯನ್ನು ಸಮರ್ಪಕವಾಗಿ ಅನುಸರಿಸಬೇಕು ಎಂದರು.

ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕರಾದ ಪ್ರೊ. ನಾಗರಾಜ ರವರು ಮಾತನಾಡಿ ಈ ಹಿಂದಿನ ವರ್ಷಗಳಲ್ಲಿ ಸಂಯೋಜನೆ ಪ್ರಕ್ರಿಯೆಗಳು ತಡವಾಗಿ ನಡೆಯುತ್ತಿದ್ದುದ್ದರಿಂದ ತೊಂದರೆಯಾಗುತ್ತಿತ್ತು. ಪ್ರಸ್ತುತ ಸಂಯೋಜನೆ ಪ್ರಕ್ರಿಯೆ ಪೂರ್ಣವಾಗಿದ್ದು ಶೀಘ್ರದಲ್ಲಿಯೇ ಆದೇಶಗಳನ್ನು ನೀಡಲಾಗುವುದು. ಇದರಿಂದ ತಾಂತ್ರಿಕವಾಗಿ ತೊಂದರೆಯಾಗುವುದಿಲ್ಲ ಎಂದರು. ಕುಲಸಚಿವರು ಮಾತನಾಡಿ ಶೈಕ್ಷಣಿಕ ವೇಳಾಪಟ್ಟಿಯನ್ನು ಸರಿದಾರಿಗೆ ತರಬೇಕೆನ್ನುವ ಉದ್ದೇಶದಿಂದ ರಜಾ ದಿನಗಳನ್ನು ಕೂಡ ಕಡಿತಗೊಳಿಸಿ ತರಗತಿಗಳನ್ನು ನಡೆಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಹಾಗೂ ಕಾಲೇಜುಗಳಿಂದ ಶೈಕ್ಷಣಿಕ ವೇಳಾಪಟ್ಟಿ ಮುಂದೂಡುವಂತೆ ಯಾವುದೇ ಮನವಿಗಳು/ಒತ್ತಡಗಳು ಬಾರದಿದ್ದಲ್ಲಿ ಸರಿಯಾಗುತ್ತದೆ ಎಂದರು.

**2025:ಎಸಿ–2.04.4:** __ಪ್ರೊ. ಜಗನ್ನಾಥ ಕೆ. ಡಾಂಗೆ:__ ಬಿ.ಇಡಿ. ಕೋರ್ಸ್‌ಗೆ ಪರಿಷ್ಕೃತ ರೆಗ್ಯುಲೇಷನ್ ಮತ್ತು ಪಠ್ಯಕ್ರಮ ಅನುಮೋದನೆ ಕುರಿತು.

ಶಿಕ್ಷಣ ನಿಕಾಯದ ಡೀನರಾದ ಪ್ರೊ.ಜಗನ್ನಾಥ ಕೆ. ಡಾಂಗೆ ರವರು ವಿಷಯ ಮಂಡಿಸಿ ಮಾತನಾಡಿ, ದಿನಾಂಕ:18–02–2025 ರಂದು ನಡೆದ ಸ್ನಾತಕ ಶಿಕ್ಷಣ ಅಧ್ಯಯನ ಮಂಡಳಿಯ ಸಭೆಯಲ್ಲಿ 2024–25ನೇ ಸಾಲಿನ ಬಿ.ಇಡಿ. ಕೋರ್ಸ್‌ಗೆ National Credit Frame Work ಮತ್ತು CBCS ಆಧಾರಿತ ಪಠ್ಯಕ್ರಮವನ್ನು ಸಿದ್ಧಪಡಿಸಲಾಗಿದ್ದು, ಸದರಿ ಪಠ್ಯಕ್ರಮವನ್ನು ದಿನಾಂಕ:19–02–2025 ರಿಂದ ಪ್ರಾರಂಭಗೊಂಡ ಬಿ.ಇಡಿ. ಪ್ರಥಮ ಸೆಮಿಸ್ಟರ್ ಕಾರ್ಯಕ್ರಮದಲ್ಲಿ ಅಳವಡಿಸಿಕೊಂಡಿದ್ದು, ಸದರಿ ಪಠ್ಯಕ್ರಮದ ವಿವರಗಳನ್ನು ನೀಡುತ್ತಾ, ವಿದ್ಯಾವಿಷಯಕ ಪರಿಷತ್ ಸಭೆಗೆ ಮಂಡಿಸಿ ಕ್ರೆಡಿಟ್ ಮತ್ತು C.B.C.S. ಆಧಾರಿಕ ಬಿ.ಇಡಿ. ಪಠ್ಯಕ್ರಮವನ್ನು ಅನುಮೋದಿಸುವಂತೆ ಕೋರಿದರು.

ಚರ್ಚೆಯ ನಂತರ National Credit Frame Work ಮತ್ತು C.B.C.S. ಆಧಾರಿತ ಬಿ.ಇಡಿ. ಪಠ್ಯಕ್ರಮವನ್ನು 2024–25ನೇ ಸಾಲಿನಿಂದ ಅಳವಡಿಸಿಕೊಳ್ಳಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

2) 

2025:ಎಸಿ–2.04.5(ಎ): <u>ಡಾ. ಸಂಧ್ಯಾಕಾವೇರಿ:</u> ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡುವ ಕುರಿತು.

ಕಟೀಲ್ ಅಶೋಕ ಪೈ ಕಾಲೇಜಿನ ಪ್ರಾಂಶುಪಾಲರಾದ ಡಾ. ಸಂಧ್ಯಾಕಾವೇರಿಯವರು ಮಾತನಾಡಿ, ಸೆಮಿಸ್ಟರ್ ಪರೀಕ್ಷೆಗಳು ನಡೆಯುವ ಸಂದರ್ಭದಲ್ಲಿಯೇ ಜರುಗುವ ರಾಷ್ಟ್ರಮಟ್ಟದ ಮಹತ್ವದ ಎನ್.ಎಸ್.ಎಸ್. ಎನ್.ಸಿ.ಸಿ. ಶಿಬಿರಗಳು ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ವಿದ್ಯಾರ್ಥಿಗಳು ಪರೀಕ್ಷೆಗಳಿಂದ ವಂಚಿತರಾಗುತ್ತಾರೆ. ಅವರು ಮತ್ತೆ ಮುಂದಿನ ಪರೀಕ್ಷೆಗಳವರೆಗೆ ಕಾಯಬೇಕಾಗುತ್ತದೆ. ಅಲ್ಲದೇ ಅವರುಗಳು ರಿಪೀಟರ್ ವಿದ್ಯಾರ್ಥಿಗಳೆಂದು ಪರಿಗಣಿಸಿ ಅವರನ್ನು ರ್‍ಯಾಂಕ್‌ಗಳಿಗೆ ಕೂಡ ಪರಿಗಣಿಸುವುದಿಲ್ಲ. ಆದುದರಿಂದ ಅಂತಹ ವಿದ್ಯಾರ್ಥಿಗಳಿಗೆ ವಿಶೇಷ ಪರೀಕ್ಷೆಗಳನ್ನು ನಡೆಸಿ, ಅವರುಗಳನ್ನು ರಿಪೀಟರ್ಸ್ ಎಂದು ಪರಿಗಣಿಸಬಾರದು ಮತ್ತು ಅವರುಗಳನ್ನು ರ್‍ಯಾಂಕ್‌ಗೆ ಪರಿಗಣಿಸಬೇಕು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ ಎನ್.ಸಿ.ಸಿ. ಮತ್ತು ಎನ್.ಎಸ್.ಎಸ್. ವಿದ್ಯಾರ್ಥಿಗಳು ರಾಷ್ಟ್ರೀಯ ಮಟ್ಟದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಮತ್ತು ಕ್ರೀಡಾಪಟುಗಳು ರಾಷ್ಟ್ರಮಟ್ಟದ ಅಂತರ ವಿಶ್ವವಿದ್ಯಾಲಯ ಪಂದ್ಯಾವಳಿಗಳು ಮತ್ತು ಅಂತರರಾಷ್ಟ್ರೀಯ ಮಟ್ಟದ ಅಂಗೀಕೃತ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಬಹುದು. ಇದಕ್ಕೆ ರೆಗ್ಯುಲೇಷನ್‌ಗಳಲ್ಲಿ ತಿದ್ದುಪಡಿ ಆಗಬೇಕಿದ್ದಲ್ಲಿ ಪರಿಶೀಲಿಸಿ ಮುಂದಿನ ಸಭೆಗೆ ವಿಷಯ ಮಂಡಿಸಬಹುದು ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಇದರ ಕುರಿತು ಒಂದು ಸಮಿತಿಯನ್ನು ರಚಿಸಿ, ಸಾಧಕ ಬಾಧಕಗಳನ್ನು ಸಮಗ್ರವಾಗಿ ಪರಿಶೀಲಿಸಿ, ಮಾರ್ಗದರ್ಶಿಗಳನ್ನು ರಚಿಸಿ, ರೆಗ್ಯುಲೇಷನ್‌ಗೆ ತಿದ್ದುಪಡಿ ಮಾಡಲು ಕ್ರಮ ಕೈಗೊಳ್ಳಬಹುದು ಎಂದು ತಿಳಿಸಿದ್ದನ್ನು ಸಭೆಯು ಒಪ್ಪಿತು.

2025:ಎಸಿ–2.04.5(ಬಿ): <u>ಡಾ. ಸಂಧ್ಯಾಕಾವೇರಿ:</u> ಪ್ಲಾಸ್ಟಿಕ್ ಮುಕ್ತ ವಿಶ್ವವಿದ್ಯಾಲಯ ಕುರಿತು.

ಡಾ. ಸಂಧ್ಯಾಕಾವೇರಿ ರವರು ಮಾತನಾಡಿ, ಬೇಗನೆ ಮಣ್ಣಿನಲ್ಲಿ ಕರಗಲಾರದ ಪ್ಲಾಸ್ಟಿಕ್‌ನಿಂದ ಪರಿಸರದ ಮೇಲೆ ಗಂಭೀರ ಪರಿಣಾಮಗಳಾಗುತ್ತಿವೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಆವರಣದಲ್ಲಿ ಆದಷ್ಟು ಪ್ಲಾಸ್ಟಿಕ್ ಬಳಕೆ ಕಡಿಮೆಯಾಗಬೇಕು. ಕಾರ್ಯಕ್ರಮಗಳಲ್ಲಿ ಕುಡಿಯುವ ನೀರಿಗಾಗಿ ಪ್ಲಾಸ್ಟಿಕ್ ಬಾಟಲ್, ಬೊಕ್ಕೆ/ಉಡುಗೊರೆಗಳಿಗೆ ಪ್ಲಾಸ್ಟಿಕ್ ಮೇಲೊದಿಕೆ ಮುಂತಾದುವುಗಳ ಬಳಕೆಯನ್ನು ಆದಷ್ಟು ಕಡಿಮೆ ಮಾಡಬೇಕು. ಬಳಸಿದ ಪ್ಲಾಸ್ಟಿಕ್‌ನ್ನು ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಬೇಕು. ಇದಕ್ಕಾಗಿ ಸಮಗ್ರವಾಗಿ ಅಧ್ಯಯನ ಮಾಡಿ ಮಾರ್ಗಸೂಚಿಗಳನ್ನು ಸಿದ್ಧಪಡಿಸಿ ಹೊರಡಿಸಬೇಕು. ಅಲ್ಲದೇ ವಿಶ್ವವಿದ್ಯಾಲಯದ ವ್ಯಾಪ್ತಿಯ ಕಾಲೇಜುಗಳಲ್ಲಿ ಕೂಡ ಈ ಬಗ್ಗೆ ಅರಿವು ಮೂಡಿಸಿ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವಂತೆ ಸೂಚನೆ ನೀಡಬೇಕು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಇದೊಂದು ಉತ್ತಮ ಸಲಹೆಯಾಗಿದ್ದು, ಇದನ್ನು ಒಪ್ಪಬಹುದು. ವಿಶ್ವವಿದ್ಯಾಲಯದ ಪರಿಸರ ಅಧ್ಯಯನ ವಿಭಾಗದ ಸಹಯೋಗದೊಂದಿಗೆ ಈ ಕುರಿತು ಸಮಗ್ರ ಪರಿಶೀಲನೆ ನಡೆಸಿ ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗುವುದು ಎಂದರು.

2025:ಎಸಿ–2.04.5(ಸಿ): <u>ಡಾ. ಸಂಧ್ಯಾಕಾವೇರಿ:</u> ಆನ್‌ಲೈನ್ ಪ್ರಕ್ರಿಯೆ ಕುರಿತು ಸಿಬ್ಬಂದಿಗಳಿಗೆ ತರಬೇತಿ ನೀಡುವ ಕುರಿತು.

ಡಾ. ಸಂಧ್ಯಾಕಾವೇರಿ ರವರು ಮಾತನಾಡಿ, ಇತ್ತೀಚೆಗೆ ಸಂಯೋಜನೆ, ಪ್ರವೇಶ, ಪ್ರವೇಶ ಅನುಮೋದನೆ, ಪರೀಕ್ಷಾ ಕಾರ್ಯಗಳು, ವಿದ್ಯಾರ್ಥಿವೇತನ ಸೇರಿದಂತೆ ಎಲ್ಲಾ ಪ್ರಕ್ರಿಯೆಗಳು ಆನ್‌ಲೈನ್ ಮೂಲಕ ನಿರ್ವಹಿಸುವುದು ಅನಿವಾರ್ಯವಾಗಿದೆ. ಸಮರ್ಪಕ ಮಾಹಿತಿ ಮತ್ತು ತರಬೇತಿಯ ಕೊರತೆಯಿಂದ ಇದರಲ್ಲಿ ಬಹಳ ತಪ್ಪುಗಳಾಗುತ್ತಿವೆ. ಆದುದರಿಂದ ಇದರ ಕುರಿತಾಗಿ ಸಂಬಂಧಪಟ್ಟ

ಸಿಬ್ಬಂದಿಗಳಿಗೆ ಒಂದು ತರಬೇತಿ/ಕಾರ್ಯಾಗಾರ ನಡೆಸುವುದರ ಮೂಲಕ ತರಬೇತಿ ನೀಡಿದಲ್ಲಿ ತಪ್ಪುಗಳನ್ನು ಕಡಿಮೆ ಮಾಡಬಹುದು ಎಂದರು.

ಕುಲಸಚಿವ (ಮೌಲ್ಯಮಾಪನ) ರವರು ಮಾತನಾಡಿ, ಆನ್‌ಲೈನ್ ಪ್ರಕ್ರಿಯೆಗಳ ಬಗ್ಗೆ ಸಂಬಂಧಪಟ್ಟ ಸಿಬ್ಬಂದಿಗಳಿಗೆ ತರಬೇತಿ ನೀಡಲಾಗುವುದು ಎಂದರು.

**2025:ಎಸಿ–2.04.6:** ಡಾ. ರಾಕೇಶ್ ಎಸ್.ಪಿ. : – ಪರೀಕ್ಷಾ ಸಂಭಾವನೆ ಬಿಲ್ಲುಗಳ ಕುರಿತು.

ಡಾ. ರಾಕೇಶ್ ಎಸ್.ಪಿ. ರವರು ಮಾತನಾಡಿ ಬಿ.ಇಡಿ. ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಆದರೆ, 2023–24ನೇ ಸಾಲಿನ ಪ್ರಾಯೋಗಿಕ ತರಗತಿಗಳ ಸಂಭಾವನೆ ಬಗ್ಗೆ ವಿಶ್ವವಿದ್ಯಾಲಯದಿಂದ ಆದೇಶ ಬಂದಿಲ್ಲ. ಇದರಿಂದಾಗಿ ಸಂಭಾವನೆ ಬಿಲ್ಲುಗಳನ್ನು ಸಿದ್ಧಪಡಿಸಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ಪ್ರಾಯೋಗಿಕ ಪರೀಕ್ಷೆ ನಡೆಸಿದ ಶಿಕ್ಷಕರು ಈ ಬಗ್ಗೆ ಕೇಳುತ್ತಿದ್ದಾರೆ ಎಂದರು. ಕುಲಸಚಿವ (ಮೌಲ್ಯಮಾಪನ) ರವರು ಮಾತನಾಡಿ ಸರ್ಕಾರದ ಏಕರೂಪದ ಶುಲ್ಕ ಮತ್ತು ಸಂಭಾವನೆಯ ಅನುಷ್ಠಾನದ ಬಗ್ಗೆ ದಿನಾಂಕ:24–03–2025 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯವಾಗಿದ್ದು ಶೀಘ್ರದಲ್ಲಿಯೇ ಆದೇಶ ನೀಡಲಾಗುವುದು ಎಂದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

15/4/2025

ಸಹಿ/–
ಕುಲಪತಿಗಳು